ಓಂ ಹ್ರೀಂ ಶ್ರೀಂ

# ಶ್ರೀವಾಸವಿ ಕನ್ಯಕಾ ದೇವಿ ಪುರಾಣ

## ತೃತೀಯಾಧ್ಯಾಯ

ಆದಿಶೇಷನು ಧರ್ಮನಂದನನಿಗೆ ಸೃಷ್ಟಿಕ್ರಮವನ್ನು, ವರ್ಣೋತ್ಪತ್ತಿಯನ್ನು ಕುರಿತು ನೀಡಿದ ವಿವರಣೆ:

ಧರ್ಮನಂದನನಿಗೆ ಆದಿಪರಾಶಕ್ತಿಯ ತತ್ವವನ್ನು ಕುರಿತು ತಿಳಿಸಿದ ಭಗವಾನ್ ಆದಿಶೇಷನು ಅವನಿಗೆ ಮತ್ತೆ ಈ ವಿಧವಾಗಿ ಹೇಳತೊಡಗಿದನು. "ಓ ಧರ್ಮನಂದನ! ಪರಾಶಕ್ತಿಯ ಸತ್ಯತತ್ವವನ್ನು ಕೇಳಿ ಧನ್ಯನಾದೆ. ಇನ್ನು ಸೃಷ್ಟಿಕ್ರಮವನ್ನು ಕುರಿತು ಈಗ ಹೇಳುವೆನು. ಸಾವಧಾನದಿಂದ ಶ್ರವಣಮಾಡು ವತ್ಸಾ ! ಸೃಷ್ಟಿಗಿಂತ ಮೊದಲು ಆತ್ಮಸ್ವರೂಪಿಣಿಯಾದ ದೇವಿಯೇ ಇದ್ದಳು. ಆತ್ಮಕ್ಕಿಂತ ಬೇರಾದ ಮತ್ತಾವುದೂ ಇರಲಿಲ್ಲ ಆ ಆತ್ಮರೂಪವೇ ಪರಮಾತ್ಮ ಅದೇ "ಚಿತ್" ಎಂದೂ 'ಸಂವಿತ್" ಎಂದೂ "ಪರಬ್ರಹ್ಮ" ವೆಂದೂ, ಹಲವು ವಿಧನಾಮಗಳಿಂದ ಹೇಳಲ್ಪಟ್ಟಿದೆ. ಆ ಆತ್ಮವು ಮಾತು ಮನಸ್ಸುಗಳಿಗೆ ಎಟುಕುವುದಲ್ಲ. ಕೇವಲ ಶೃತಿಪ್ರಾಮಾಣ್ಯದಿಂದಲೇ ತಿಳಿಯುವಂಥಹುದು. ಅದರೊಡನೆ ಹೋಲಿಸಬಹುದಾದ ಎರಡನೆಯ ವಸ್ತುವು ಜಗತ್ತಿನಲ್ಲಿಲ್ಲ. ಇರುವಿಕೆ, ಹುಟ್ಟುವಿಕೆ, ಬೆಳೆಯುವಿಕೆ, ಬದಲಿಸುವಿಕೆ, ಕ್ಷಯಿಸುವಿಕೆ, ನಶಿಸುವಿಕೆ ಎಂಬ ಷಡ್ವಿಕಾರಗಳಿಲ್ಲದಿರುವುದು ಆತ್ಮ ಅದನ್ನೇ ಸಮಸ್ತ ವೇದಶಾಸ್ತ್ರಗಳು ಅವ್ಯಾಕೃತವೆಂದು ಅವ್ಯಕ್ತವೆಂದು ಸಮಸ್ತಕಾರಣಗಳಿಗೆ ಕಾರಣವೆಂದು ಆದಿತತ್ವವೆಂದು ಸಚ್ಚಿದಾನಂದ ರೂಪವೆಂದು ತಿಳಿಸಿಕೊಟ್ಟಿವೆ. ಆದಿಪರಾಶಕ್ತಿಯಾದ ನಿರ್ಗುಣರೂಪವೆಂದು ತಿಳಿಯಲಾಗುವುದು. ಶುದ್ಧ ಚೈತನ್ಯವಾದ ಆ ದೇವಿಯು ಮಾಯೆಯ ಒಂದಾಗುವಿಕೆಯಿಂದ ಸೃಷ್ಟಿಗೆ ನಿಮಿತ್ತಕಾರಣಳಾಗಿರುವಳು. ಹೀಗೆ ಮಾಯಾ ಸಹಿತವಾದ

ಪರಾಶಕ್ತಿಯು ಸಗುಣರೂಪಿಣಿಯಾಗಿ ವಿರಾಜಿಸುವಳೆಂದು ತಿಳಿಯಲಾಗುವುದು. ಸಮಸ್ತ ಪ್ರಾಣಿಗಳ ಕರ್ಮಗಳೆಲ್ಲ ಬೀಜರೂಪದಲ್ಲಿ ಎಲ್ಲಿರುವುವೋ ಇಚ್ಛೆ, ಜ್ಞಾನ, ಕ್ರಿಯೆಗಳಿಗೆ ಯಾವುದು ಆಧಾರವಾಗುವುದೋ ಆ ಸರ್ವಸಾಕ್ಷಿಯಾದ ಆದಿತತ್ವವಾದ (ಸಗುಣ ಪರಾಶಕ್ತಿಯಿಂದ) ಶಬ್ದಗುಣದ ಆಕಾಶವು ಉದಯಿಸಿತು. ಆ ಆಕಾಶದಿಂದ ಸ್ಪರ್ಶಗುಣದ ವಾಯುವು ಜನಿಸಿತು. ಆ ವಾಯುವಿನಿಂದ ರೂಪಗುಣಾತ್ಮಕವಾದ ತೇಜಸ್ಸು (ಅಗ್ನಿ) ಪ್ರಭವಿಸಿತು. ಆ ತೇಜಸ್ಸಿನಿಂದ ರಸಗುಣದ ಜಲವು ಉದಯಿಸಿತು. ಅನಂತರ ಆ ಜಲದಿಂದ ಗಂಧಗುಣಾತ್ಮಕವಾದ ಪೃಥ್ವಿಯು ಜನಿಸಿತು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಸೂಕ್ಷ್ಮಭೂತಗಳು ಪಂಚತನ್ಮಾತ್ರೆಗಳೆಂದು ಕರೆಯಲ್ಪಡುವುವು. ಆ ಸೂಕ್ಷ್ಮಭೂತಗಳಾದ ತನ್ಮಾತ್ರೆಗಳಿಂದ ಏರ್ಪಟ್ಟ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂಬ ಪಂಚಭೂತಗಳ ಕಾರ್ಯವಾಗಿ ಈ ಅನಂತವಿಶ್ವವು ಮೈತಳೆದಿದೆ.

ಅನಂತವಾದ ಈ ವಿರಾಟ್ ವಿಶ್ವವೇ ಪರಬ್ರಹ್ಮ ಶಕ್ತಿಯಾದ ದೇವಿಗೆ ಸ್ಥೂಲದೇಹವಾಯಿತು. ಈ ವಿರಾಟ್ ವಿಶ್ವರೂಪವನ್ನೇ ವಿರಾಟ್ ಬ್ರಹ್ಮವೆಂದು, ವಿರಾಟ್ ಪುರುಷನೆಂದು ವೇದಾಂತಿಗಳು ಹೇಳುತ್ತಿರುವರು. ಈ ವಿರಾಟ್ಪುರುಷನ ದೇಹದ ಸರ್ವಾಂಗಗಳಾದ ಜಡ, ಚೇತನಮಯವಾದ ಸಮಸ್ತ ಜಗತ್ತುಗಳು ಪ್ರಭವಿಸಿದವು. ಈ ವಿಶ್ವರೂಪಿಯ ಮನಸ್ಸಿನಿಂದ ಚಂದ್ರನು, ನೇತ್ರಗಳಿಂದ ಸೂರ್ಯನು, ನಾಭಿಯಿಂದ ಅಂತರಿಕ್ಷವು, ಶಿರಸ್ಸಿನಿಂದ ಆಕಾಶವು, ಪಾದಗಳಿಂದ ಭೂಮಿಯು, ಕರ್ಣಗಳಿಂದ ದಿಕ್ಕುಗಳು ಉಂಟಾದವೆಂದು, ಭೂತರಾಶಿಯೊಡಗೂಡಿದ ಈ ವಿಶ್ವವೆಲ್ಲ ದೇವಿಯ ಸ್ಥೂಲರೂಪವಾದ ವಿರಾಟ್ ಪುರುಷನಲ್ಲಿ ಒಂದು ಪಾದವಾಗಿದೆಯೆಂದು, ಮಿಕ್ಕ ಮೂರು ಪಾದಗಳ ಭಾಗವು ಅಮೃತಸ್ವರೂಪವಾದ ಸ್ವಯಂಜ್ಯೋತಿಯಾಗಿ ಬೆಳಗುತ್ತಿದೆಯೆಂದು ವೇದಗಳು ಅಭಿವರ್ಣಿಸಿವೆ. ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳೆಂಬ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಚತುರ್ಮುಖ ಬ್ರಹ್ಮ ಮಹಾವಿಷ್ಣು, ಈಶ್ವರ ಎಂಬ ತ್ರಿಮೂರ್ತಿಗಳನ್ನು ಪರಾಶಕ್ತಿಯು ಸೃಜಿಸಿದಳು.

ಆ ಚತುರ್ಮುಖ ಬ್ರಹ್ಮನ ಮನಸ್ಸಿನಿಂದ ಅಪರಾರ್ಕನು, ಪ್ರಾಣವಾಯುವಿನಿಂದ ಪ್ರಜಾಪತಿಯು, ಅಪಾನವಾಯುವಿನಿಂದ ಕ್ರತುವು ವ್ಯಾನವಾಯುವಿನಿಂದ ಪುಲಹನು,

ಉದಾನವಾಯುವಿನಿಂದ ಪುಲಸ್ತ್ಯನು, ಸಮಾನವಾಯುವಿನಿಂದ ವಸಿಷ್ಠನು ಉದ್ಭವಿಸಿದರು. ಆ ಬ್ರಹ್ಮನ ಎಡಭಾಗದಿಂದ ಸ್ತ್ರೀಯರೂ, ಬಲಭಾಗದಿಂದ ಪುರುಷರೂ ಆವಿರ್ಭವಿಸಿದರು. ಅವರೆಲ್ಲರೂ ಬ್ರಹ್ಮನ ಆಜ್ಞೆಯಿಂದ ಕರ್ಮಭೂಮಿಯಾದ ಭೂಲೋಕವನ್ನು ಸೇರಿದರು, ಲೋಕಪಿತಾಮಹನಾದ ಆ ಬ್ರಹ್ಮನು ಸಕಲ ಪ್ರಾಣಿಗಳಿಗೆ ಅವರವರಿಗೆ ಯೋಗ್ಯವಾದ, ಅವರವರಿಗೆ ಉಚಿತವಾದ ಜೀವನಾಧಾರಗಳನ್ನು ನಿಯಮಗಳನ್ನು ನಾನಾವಿಧ ದೇಶಗಳನ್ನು ಕಲ್ಪಿಸಿದನು.

ಅನಂತರ ಬ್ರಹ್ಮನು ತನ್ನ ಅವಯವ ಭೇದಗಳಿಂದ ಜನ್ಮಿಸಿದ ಮಾನವೋತ್ತಮರಾದ ಋಷಿಗಳಿಗೆ ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ವೇದಗಳನ್ನು ಪ್ರಸಾದಿಸಿದನು. ಪ್ರಳಯಪೂರ್ವದ ಜನ್ಮಗಳ ಸಂಸ್ಕಾರಬಲದಿಂದ ಮನನಶೀಲರಾದ ಆ ಮಹರ್ಷಿಗಳು ಮಾನವ ಸಮಾಜಕ್ಕೆ ಪ್ರಾಥಮಿಕ ಅಗತ್ಯಗಳಾದ ಆಹಾರ ಪದಾರ್ಥಗಳನ್ನು ಉದಾತ್ತ ವಿಧಾನದಲ್ಲಿ ಹೊಂದುವುದಕ್ಕೆ ಅನುವಾದ ವ್ಯವಸಾಯ, ಪಶುಪಾಲನೆ, ವಸ್ತುಗಳ ವಿನಿಮಯರೂಪವಾದ ವಾಣಿಜ್ಯಗಳನ್ನು ವೈದಿಕಕರ್ಮಗಳನ್ನು ಕಂಡುಕೊಂಡು ಋಗ್ವೇದದ ಮುಖೇನ ಅಂದಿನ ಸಮಾಜಕ್ಕೆ ಪ್ರಬೋಧಿಸಿದರು. ಆ ಕರ್ಮಗಳಲ್ಲಿ ಪ್ರವೇಶಿಸಿದವರು ವಿಶಗಣಗಳೆಂದು ಕರೆಯಲ್ಪಟ್ಟರು. ತದನಂತರ ಆ ವಿಶಗಣಗಳವರೆ ವೈಶ್ಯವರ್ಣದವರಾಗಿ ರೂಪತಾಳಿದರು. ಅನಂತರ ದೇಶವನ್ನು ಧರ್ಮಕರ್ಮೋಪಾಯಗಳನ್ನು ಮಹರ್ಷಿಗಳು ದರ್ಶಿಸಿ ಯಜುರ್ವೇದಾದಿಗಳ ಮೂಲಕ ಸಮಾಜಕ್ಕೆ ಬೋಧಿಸಿದರು. ಆ ವೈದಿಕ ಕರ್ಮಗಳಲ್ಲಿ ಪ್ರವೇಶಿಸಿದವರು ರಾಜನ್ಯಗಣಗಳಾಗಿ ಕರೆಯಲ್ಪಟ್ಟು ಅನಂತರ ಕ್ಷತ್ರಿಯ ವರ್ಣದವಾರಾಗಿ ರೂಪಹೊಂದಿದರು. ಸಮೃದ್ಧವಾದ ಸಂಪತ್ತುಗಳು, ಸಮರ್ಥವಾದ ರಕ್ಷಣೆ ಏರ್ಪಟ್ಟ ಬಳಿಕ ಅನಂದಾನ್ವೇಷಣೆ ಮಾಡಿದ ಮಹರ್ಷಿಗಳು ಸಾಮವೇದಮುಖೇನ ಸಮಾಜಕ್ಕೆ ಬ್ರಹ್ಮಾನಂದಸಹೋದರಾನಂದದಾಯಕವಾದ ಕಲೆಗಳನ್ನು ಏರ್ಪಟ್ಟ ಬಳಿಕ ಆನಂದಾನ್ವೇಷಣೆ ಮಾಡಿದ ಮಹರ್ಷಿಗಳು ಸಾಮವೇದಮುಖೇನ ಸಮಾಜಕ್ಕೆ ಬ್ರಹ್ಮಾನಂದಸಹೋದರಾನಂದ ದಾಯಕವಾದ ಕಲೆಗಳನ್ನು ಬ್ರಹ್ಮಾನಂದ ಸಾಧಕವಾದ ಜ್ಞಾನವನ್ನು ಕಂಡುಕೊಂಡು

ಬೋಧಿಸಿದರು. ಆ ಕರ್ಮಗಳಲ್ಲಿ ಪ್ರವೇಶಿಸುವ ಯೋಗ್ಯತೆಯುಳ್ಳವರು ವೇದಾಧ್ಯಾಪನ, ಯಜನಾದಿ ವೃತ್ತಿಗಳಲ್ಲಿ ಪ್ರವೇಶಿಸಿ ವಿಪ್ರಗಣಗಳಾಗಿ ಕರೆಯಲ್ಪಟ್ಟು ಆ ಬಳಿಕ ಬ್ರಾಹ್ಮಣವರ್ಣದವರಾಗಿ ರೂಪುಗೊಂಡರು. ಹೀಗೆ ಪ್ರಥಮವೇದವಾದ ಋಗ್ವೇದದಿಂದ ವೈಶ್ಯವರ್ಣವು. ಎರಡನೆಯ ವೇದವಾದ ಯಜುರ್ವೇದದಿಂದ ಕ್ಷತ್ರಿಯವರ್ಣವು, ಮೂರನೆಯ ವೇದವಾದ ಸಾಮವೇದದಿಂದ ಬ್ರಾಹ್ಮಣವರ್ಣವು ನಾಲ್ಕನೆಯದಾದ ಅಥರ್ವಣ ವೇದದಿಂದ ಶೂದ್ರವರ್ಣವು ಏರ್ಪಟ್ಟವು ಆದ್ದರಿಂದಲೇ ಶೃತಿಯು

**ಋಗ್ಭ್ಯೋ ಜಾತಂ ವೈಶ್ಯರ್ಣಮಾಹುಃ**

**ಯಜುರ್ವೇದಂ ಕ್ಷತ್ರಿಯಸ್ಯಾಹು ರ್ಯೋನಿಂ**

**ಸಾಮವೇದೋ ಬ್ರಾಹ್ಮಣಾನಾಂ ಪ್ರಸೂತಿಃ**

**ಪೂರ್ವೇ ಪೂರ್ವೇಭ್ಯೋ ವಚ ಏತದೂಚುಃ**

ಎಂದು ತಿಳಿಸಿಕೊಟ್ಟಿದೆ.

ಹೀಗೆ ವೇದಗಳು ತಿಳಿಸಿದ ಕರ್ಮಗಳಲ್ಲಿ ಪ್ರವೇಶಿಸಿದವರಾಗಿ ವಿರಾಟ್ ವಿಶ್ವಮಾನವ ಸಂಘಸ್ವರೂಪ ಬ್ರಹ್ಮನಿಗೆ ಬ್ರಾಹ್ಮಣರು ಮುಖವಾಗಿಯೂ ಕ್ಷತ್ರಿಯರು ಬಾಹುಗಳಾಗಿಯೂ ವೈಶ್ಯರು ತೊಡೆಗಳಾಗಿಯೂ, ಶೂದ್ರರು ಪಾದಗಳಾಗಿಯೂ ರೂಪಗೊಂಡರು. ಈ ವಿಷಯವೇ ಋಗ್ಯಜುರ್ವೇದಗಳಲ್ಲಿ **ಬ್ರಾಹ್ಮಣೋಽಸ್ಯ ಮುಖಮಾಸೀತ್ ಬಾಹೂರಾಜನ್ಯಕೃತಃ**

**ಊರೂತದಸ್ಯ ಯದ್ವೈಶ್ಯಃ ಪದ್ಭ್ಯಾಗ್‌ಂಶೂದ್ರೋ ಅಜಾಯತ**

ಎಂದು ಅಲಂಕಾರಿಕವಾಗಿ ಹೇಳಲ್ಪಟ್ಟಿದೆ.

ಬ್ರಹ್ಮನು ಅಂಗೀರಸನನ್ನು ದೇವಬ್ರಾಹ್ಮಣ ಋಷಿಗಳಿಗೆ ಸಕಲಕರ್ಮಗಳ ವಿಷಯವಾಗಿ ನಿಯಾಮಕನನ್ನಾಗಿಯೂ, ವಸಿಷ್ಠನನ್ನು ಕ್ಷತ್ರಿಯರಿಗೆ ನಿಯಾಮಕನನ್ನಾಗಿಯೂ, ಅಪರಾರ್ಕನನ್ನು ವೈಶ್ಯರಿಗೆ ಶಿಕ್ಷಕನನ್ನಾಗಿಯೂ ನಿಯಮಿಸಿದನು. ಭುವಿಯಲ್ಲಿ ಅಂಗೀರಸ ಮಹರ್ಷಿಗಳು ಬ್ರಾಹ್ಮಣರಿಗೆ ವೇದವಿಹಿತ ಕರ್ಮಗಳನ್ನು ಶ್ರೌತ ಸ್ಮಾರ್ತಕರ್ಮಗಳನ್ನು ಬಹುವಿಧ ಯಜ್ಞಗಳನ್ನು

ಚೆನ್ನಾಗಿ ಅರುಹಿದರು. ಬ್ರಹ್ಮರ್ಷಿ ವಸಿಷ್ಠರು ರಾಜ ಪ್ರಜಾ ಧರ್ಮಗಳನ್ನು ಪ್ರಜಾಪರಿಪಾಲನಾ ಪದ್ಧತಿಗಳನ್ನು ರಕ್ಷಣವಿಧಾನಗಳನ್ನು ಕ್ಷತ್ರಿಯರಿಗೆ ಸಮುಚಿತವಾಗಿ ಬೋಧಿಸಿದರು. ಅಪರಾರ್ಕ ಮಹರ್ಷಿಗಳು ಸಕಲ ವಸ್ತುಗಳ ಪರಿಜ್ಞಾನವನ್ನು, ಕ್ರಯ ವಿಕ್ರಯಗಳಲ್ಲಿ ಕುಶಲತೆಯನ್ನು, ಧರ್ಮಾಧರ್ಮ ವಿಚಕ್ಷಣತೆಯನ್ನು ಯಜ್ಞಾಚರಣೆಯನ್ನು, ದ್ವಿಜಾನುಸರಣೆಯನ್ನು ಸತ್ಯ ವ್ರತಾದಿಗಳನ್ನು ವೈಶ್ಯರಿಗೆ ಬೋಧಿಸಿದರು. ಅವರೆಲ್ಲರೂ ತಮ್ಮ ಗುರುಗಳು ಉಪದೇಶಿಸಿದ ವಿಧಾನಗಳನ್ನು ಅನುಸರಿಸಿ, ವಿದ್ಯುಕ್ತ ಕರ್ಮಗಳನ್ನು ಆಚರಿಸಿ ಪ್ರಸಿದ್ಧರಾದರು. ಶೂದ್ರರು ಸಮಾಜಕ್ಕೆ ಅಧಿಕವಾದ ಶುಶ್ರೂಷೆಯನ್ನು ಮಾಡುತ್ತ ಕಾಂಡಪುಷ್ಪರೆಂದು ಕರೆಯಲ್ಪಡುತ್ತ ಪ್ರತಿಷ್ಠೆ ಹೊಂದಿದರು.

ಬ್ರಹ್ಮಪುತ್ರರಾದ ಅಂಗೀರಸ್ಸು, ವಸಿಷ್ಠ, ಅಪರಾರ್ಕ, ಮೊದಲಾದ ಮಹರ್ಷಿಗಳು ಚತುರ್ವರ್ಣದವರಿಗೆ ಗೋತ್ರಪ್ರವರಗಳನ್ನು ನಿರ್ಮಿಸಿ ಗೃಹ್ಯಸೂತ್ರೋಕ್ತ ವಿಧಾನಗಳಿಂದ, ಉಪನಯನಾದಿ ಸಂಸ್ಕಾರಗಳನ್ನು ಮಾಡಿಸಿ ಅವರಿಂದ ಷಡಂಗಯುಕ್ತವಾದ ಮತ್ತು ಲಕ್ಷಣಯುಕ್ತವಾದ ವೇದಗಳ ಅಧ್ಯಯನವನ್ನು ಮಾಡಿಸಿದರು. ಅವರವರ ಗುಣಕರ್ಮಸ್ವಭಾವಗಳನ್ನು ಅನುಸರಿಸಿ ಗೋತ್ರಪ್ರವರಾದಿ ಭೇದಗಳನ್ನೆಣಿಸಿ ಸ್ತ್ರೀಪುರುಷರಿಗೆ ವಿವಾಹ ಕ್ರತುಗಳನ್ನು ಮಾಡಿಸಿದರು. ವೈಶ್ಯ ವರ್ಣಕ್ಕೆ ನಿಯಾಮಕನಾದ ಅಪರಾರ್ಕ ಮಹರ್ಷಿ ವೈಶ್ಯರನ್ನು ನೋಡಿ," ಶಿಷ್ಯರೇ'! ನೀವು ಇನ್ನು ಮುಂದೆ ಋಷಿಗಳನ್ನು, ಪಿತೃಗಳನ್ನು, ದೇವತೆಗಳನ್ನು ಸಂತೃಪ್ತರನ್ನಾಗಿಸುತ್ತ ಋಷಿ, ಪಿತೃ ದೇವಋಣಗಳನ್ನು ತೀರಿಸಿ ಋಣಮುಕ್ತರಾಗಿರಿ. ಪರಿಶುದ್ಧವಾದ ಗೋರಕ್ಷಣೆ, ಸತ್ಯ, ನೀತಿಯತವಾದ ವ್ಯಾಪಾರ, ನ್ಯಾಯಬದ್ಧವಾದ ಲೇವಾದೇವಿ (ಕುಸೀದ) ಸಮುಚಿತವಾದ ಕೃಷಿ ನವರತ್ನಗಳ

ಬ್ರಹ್ಮದೇವನು ವೈಶ್ಯರಿಗೆ ಕೃಷಿ, ವಾಣಿಜ್ಯ ಪಶುಪಾಲನೆಗಳು ವೈಶ್ಯ ಧರ್ಮಗಳೆಂದು ಬೋಧಿಸುವುದು.



ಬ್ರಹ್ಮದೇವನು ವೈಶ್ಯರಿಗೆ ಕೃಷಿ, ವಾಣಿಜ್ಯ, ಪಶುಪಾಲನೆಗಳು ವೈಶ್ಯ ಧರ್ಮಗಳೆಂದು ಬೋಧಿಸುವುದು.

ಕ್ರಯ, ವಿಕ್ರಯ, ವಾಣಿಜ್ಯ ಮೊದಲಾದ ಲೌಕಿಕಕರ್ಮಗಳನ್ನು, ದಾನ ಯಜನಾಧ್ಯಯನಾದಿ ಪಾರಲೌಕಿಕ ಕರ್ಮಗಳನ್ನು ಆಚರಿಸುತ್ತ ಆದರ್ಶವಾದ ವರ್ಣಾಶ್ರಮ ವಿಧಾನಗಳನ್ನು ಅನುಸರಿಸುತ್ತ ಲೋಕಕಲ್ಯಾಣಕಾರಿಗಳಾಗಿ," ಎಂದು ಬೋಧಿಸಿದನು.

**ವೈಶ್ಯರಿಗೆ ಬ್ರಹ್ಮನಿಂದ ಶ್ರೇಷ್ಠರೆಂಬ ಬಿರುದು ಪ್ರದಾನ:**

ಆ ಕಾಲದ ಸ್ವಭಾವ ಪ್ರಭಾವಗಳಿಂದ ಸಮಸ್ತ ಜನರು ಸಮಸ್ತ ಲೋಕಗಳಲ್ಲಿ ಸಂಚರಿಸುತ್ತಿದ್ದರು. ಅಂದು ಸಕಲಜನರು ಸತ್ಯಸಂಧರು, ದೀರ್ಘಾಯುಷಿಗಳು, ಅತ್ಯಂತ ಶಕ್ತಿಸಂಪನ್ನರು. ಅವರು ಬ್ರಹ್ಮದೇವನ ಆಣತಿಯ ಮೇರೆಗೆ ಸೃಷ್ಟಿಯ ಅಭಿವೃದ್ಧಿಗಾಗಿ ಶ್ರಮಿಸತೊಡಗಿದರು. ಹೀಗಿರಲು ಒಮ್ಮೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಬ್ರಹ್ಮನ ದರ್ಶನಕ್ಕಾಗಿ ಸತ್ಯಲೋಕಕ್ಕೆ ಹೋದರು. ಆ ಸಮಯದಲ್ಲಿ ಲೋಕೇಶ್ವರನಾದ ಬ್ರಹ್ಮನು ಅವರವರ ಗೋತ್ರಾಭಿವೃದ್ಧಿಯನ್ನು ಜನಸಂಖ್ಯಾಭಿವೃದ್ಧಿಯನ್ನು ತಿಳಿಸಿಕೊಡಿರೆಂದು ಆದೇಶಿಸಿದನು. ಆಗ ದೂರ್ವಾಸ ಮಹರ್ಷಿಯು 'ಓ ಪಿತಾಮಹ ! ನಮ್ಮ ಬ್ರಾಹ್ಮಣರಲ್ಲಿ ಈಗ 109 ಗೋತ್ರಗಳೂ 18

ಗಣಗಳೂ ಪ್ರಸಿದ್ಧವಾಗಿವೆ' ಎಂದು ಹೇಳಿದನು. ಕ್ಷತ್ರಿಯನಾಯಕನಾದ ಧನಂಜಯನೆಂಬ ರಾಜನು ಎದ್ದು, " ಓ ವಿಧಾತ! ನಮಗೆ 7 ಗೋತ್ರಗಳು 1 ಗಣ ಏರ್ಪಟ್ಟಿದೆ," ಎಂದು ತಿಳಿಸಿದನು. ಬಳಿಕ ವೈಶ್ಯನಾಯಕನಾದ ಸೋಮದನು ನಿಂತು, "ಬ್ರಹ್ಮದೇವ! ನವು 714 ಗೋತ್ರದವರು 102 ಗಣದವರಾದೆವು," ಎಂದು ಬಿನ್ನವಿಸಿದನು ಆಗ ಬ್ರಹ್ಮನು ವೈಶ್ಯರ ಗೋತ್ರಾಧಿಕ್ಯಕ್ಕೆ ಸಂತಸಿ, **"ಮಕ್ಕಳೇ ! ನೀವು ಪ್ರಜಾಸೃಷ್ಟಿಯನ್ನು ಅಭಿ ವೃದ್ಧಿಗೊಳಿಸುವುದರಲ್ಲಿ ಶ್ರೇ ಷ್ಠತ್ವವನ್ನು ಸಾಧಿಸಿದಿರಿ. ಆದ್ದರಿಂದ ಇನ್ನುಮುಂದೆ ಶ್ರೇಷ್ಠರು'** ಎಂಬ ಹೆಸರನ್ನು ಹೊಂದುವಿ", ಎಂದು ಹೇಳಿ ವೈಶ್ಯರನ್ನು ಆಶೀರ್ವದಿಸಿದನು. ಬಳಿಕ ಸರ್ವಜನರು ಬ್ರಹ್ಮದೇವನನ್ನು ಪೂಜಿಸಿ ಭೂಲೋಕಕ್ಕೆ ಹೊರಟುಹೋದರು. ಎಲ್ಲರೂ ಸಮಸ್ತ ಸುಖಸಂಪದಗಳಿಂದ ಶಾಂತಿಯಿಂದ ಜೀವಿಸುತ್ತ ಸಾಗಿದರು ಎಂದು ಕರುಣಾಂತರಂಗನಾದ ಆದಿಶೇಷನು ಧರ್ಮನಂದನನಿಗೆ ಯುಗಕಾಲಾದಿಗಳ ಜ್ಞಾನವನ್ನು ಪರತತ್ವ ಜ್ಞಾನವನ್ನು, ಪರಾಶಕ್ತಿ ಸಂಕಲ್ಪಾನುಸಾರ ಬ್ರಹ್ಮನಿಂದ ಉಂಟಾದ ಸಮಸ್ತ ಸೃಷ್ಟಿಕ್ರಮವನ್ನು, ವರ್ಣವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ಅರುಹಿಸಿದನು. ಆ ಅದ್ಭುತ ವಿಷಯವನ್ನು ಕೇಳಿದ ಧರ್ಮನಂದನ್ನು ಆನಂದ ಪರವಶನಾಗಿ ಆದಿಶೇಷನೊಡನೆ," ಓ ದಯಾನಿಧಿ! ದೇವ ದೇವ! ನಿನ್ನ ಕೃಪೆಯಿಂದ ಸನಾತನವೂ ಮಹತ್ತರವೂ ಆದ ಜ್ಞಾನವನ್ನು ಹೊಂದಿದವನಾದೆ. ಸೃಷ್ಟಿರಹಸ್ಯವೆಲ್ಲ ನಿನ್ನಿಂದ ಹೇಳಲ್ಪಟ್ಟಿತು. ಹೇ ಕೃಪಾಳೋ ! ನನಗೀಗ ಪ್ರಳಯಗಳ ಜ್ಞಾನವನ್ನು ಪ್ರಸಾದಿಸು," ಎಂದು ಪ್ರಾರ್ಥಿಸಿದನು. ಆದಿಶೇಷನು ಸಂತೋಷಿಸಿ ಈ ರೀತಿಯಲ್ಲಿ ಹೇಳಲಾರಂಭಿಸಿದನು.

**ಪ್ರಳಯಗಳು : ಅವುಗಳ ವಿವರಗಳು:**

" ಓ ಧರ್ಮನಂದನ ! ನೀನು ಕೇಳಿದ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸುತ್ತಿದ್ದೇನೆ. ಶ್ರದ್ಧೆಯಿಂದ ಆಲಿಸು. ಪ್ರಳಯಗಳು 4 ವಿಧ, ಪ್ರತಿಯುಗದಲ್ಲೂ ಪ್ರಕೃತಿ ವೈಪರೀತ್ಯಗಳಿಂದ ಸಂಭವಿಸುವ ಜಲಪ್ಲಾವನ, ಭೂಕಂಪ, ಅತಿ ತೀವ್ರವಾದ ಗಾಳಿ, ಮಳೆ ಮೊದಲಾದವುಗಳಿಂದ ಅಲ್ಲಲ್ಲಿ ಉಂಟಾಗುವ ಮಹೋಪದ್ರವಗಳನ್ನು ಅವಾಂತರ ಪ್ರಳಯಗಳೆಂದು ಕರೆಯಲಾಗಿದೆ. ಒಬ್ಬ ಮನುವಿನ ಕಾಲವು ಮುಗಿದು ಮತ್ತೊಬ್ಬ ಮನುವಿನ ಕಾಲವು ಪ್ರಾರಂಭವಾಗುವುದಕ್ಕೆ

ಮಧ್ಯಸಮಯದಲ್ಲಿ ಆಗುವ ಮಹಾಪ್ರಳಯವನ್ನು ಮನ್ವಂತರ ಪ್ರಳಯವೆಂದು ಕರೆಯುವರು. ಮನ್ವಂತರ ಪ್ರಳಯಗಳಲ್ಲಿ ಜೀವಿಗಳ ಪ್ರಕೃತ ಶರೀರಗಳೆಲ್ಲ ನಶಿಸಿ ಬೀಜಗಳು ಮಾತ್ರವೇ ಉಳಿಯುವು. ಮತ್ತೊಬ್ಬ ಮನುವಿನ ಕಾಲವು ಬಂದ ಕೂಡಲೇ ಬೀಜವೃದ್ಧಿ ನಡೆದು ಸೃಷ್ಟಿವಿಕಾಸವೇರ್ಪಡುವುದು. ಮನ್ವಂತರವು ಬದಲಿಸಿದಾಗ ಸೃಷ್ಟಿಯ ನೈಮಿತ್ತಿಕ ಗುಣಗಳಲ್ಲಿ ಕೂಡ ಸ್ವಲ್ಪ ಬದಲಾವಣೆಯುಂಟಾಗುವುದು. ಕೊನೆಯ ದಾಗಿ ಸಂಭವಿಸುವುದು ಕಲ್ಪಪ್ರಳಯವು. ಇದರಲ್ಲಿ ಬ್ರಹ್ಮಾಂಡದಲ್ಲಿಯ ಭುವನಗಳು, ಪಂಚಭೂತಗಳು ಪ್ರಕೃತಿಯಲ್ಲಿ ಲೀನವಾಗಿ ಹೋಗುವು. ಪರಾಶಕ್ತಿಯ ಕಾರ್ಯರೂಪವಾದ ಪ್ರಕೃತಿಯ ಸ್ಥೂಲರೂಪವು ಅಂತ್ಯಗೊಂಡು ಕಾರಣರೂಪವನ್ನು ಹೊಂದುವುದು. ಮತ್ತೆ ಮರುಕಲ್ಪವು ಪ್ರಾರಂಭವಾಗುವಾಗ ಯಥಾರೂಪದಂತೆ ಕ್ರಮಪರಿಣಾಮದಲ್ಲಿ ಸೃಷ್ಟಿಯು ನಡೆಯುವುದು. ಪ್ರಸ್ತುತ ಕಲ್ಪದಲ್ಲಿ ಸೃಷ್ಟಿ ನಡೆದ ತರುವಾಯ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷಗಳೆಂಬ 6 ಮನ್ವಂತರಗಳು ಕಳೆದುಹೋಗಿವೆ. ಪ್ರಸ್ತುತ ನಡೆಯುತ್ತಿರುವುದು ವೈವಸ್ವತ ಮನುವಿನ ಕಾಲವು. ಇದರ ತರುವಾಯ ಏಳು (7) ಮನ್ವಂತರಗಳು ನಡೆಯಬೇಕಾಗಿದೆ. ಈ 14 ಮನ್ವಂತರಗಳ ಕಾಲ ಸೇರಿ ಒಂದು ಬ್ರಹ್ಮಕಲ್ಪವಾಗುವುದು. ಹದಿನಾಲ್ಕನೆಯ ಮನ್ವಂತರದ ಅಂತ್ಯದಲ್ಲಾಗುವ ಪ್ರಳಯವೇ ಕಲ್ಪಪ್ರಳಯ.

ಮತ್ತೊಂದು ಮುಖ್ಯ ವಿಷಯವನ್ನು ಆಲಿಸು, ಈಗ ಗತಿಸಿಹೋದ ಮನ್ವಂತರವು ಜಲಪ್ರಳಯವು. ಇದೇ ಪ್ರಳಯಗಳಿಗೆ ಸಂಬಂಧಿಸಿದ ಸಂಕ್ಷಿಪ್ತ ವಿವರಣೆಯು ನೀನು ಸರ್ಗ ಸೃಷ್ಟಿ ಪ್ರತಿಸರ್ಗ ಪ್ರಳಯಗಳ ವಿಷಯಗಳನ್ನು ಕೇಳಿ ಧನ್ಯನಾದೆ," ಎಂದು ಆದಿಶೇಷನು ಧರ್ಮನಂದನನಿಗೆ ಹೇಳಿದನು. ಇಲ್ಲಿ ಹೀಗಿರಲು ಅಲ್ಲಿ ಚ್ಯವನ ಮಹರ್ಷಿಗಳು ಆಶ್ರಮದಲ್ಲಿ ಚಿಂತಾಕ್ರಾಂತರಾಗಿರುತ್ತಾರೆ. ಪುಷ್ಪ ಸಮಿಧೆಗಳಿಗಾಗಿ ಅಡವಿಗೆ ಹೋದ ಧರ್ಮನಂದನನು ಆಶ್ರಮಕ್ಕೆ ಹಿಂದಿರುಗಿ ಬಾರದಿದ್ದುದರಿಂದ ಚ್ಯವನರು ಧರ್ಮನಂದನನ್ನು ತನ್ನ ಶಿಷ್ಯಗಣಗಳಿಂದ ಅರಣ್ಯದಲ್ಲೆಲ್ಲಾ ಹುಡುಕಿಸಿದರು. ಏನೂ ಪ್ರಯೋಜನವಾಗಲಿಲ್ಲ. ಧರ್ಮನಂದನನ ಸಹಪಾಠಿಗಳು ನಿದ್ರಾಹಾರಗಳನ್ನು ತೊರೆದು ಧರ್ಮನಂದನಂಥ ಉತ್ತಮ ಮಿತ್ರನಿಲ್ಲದ ತಮ್ಮ ಜೀವನವೇಕೆಂದು

ವಿರಕ್ತರಾಗಿ ದುಃಖಿಸತೊಡಗಿದರು. ಆ ಬಳಿಕ ಭಾರ್ಗವ ಚ್ಯವನರಿಂದ ನಡೆದ ವೃತ್ತಾಂತವನ್ನು ತಿಳಿದುಕೊಂಡ ಧರ್ಮಶ್ರೇಷ್ಠಿ ದಂಪತಿಗಳು ಬಿಕ್ಕಿ ಬಿಕ್ಕಿ ಅಳುತ್ತ ಚ್ಯವನಾಶ್ರಮವನ್ನು ಸೇರಿಕೊಂಡರು. ಚ್ಯವನ ಮಹರ್ಷಿ ಅವರಿಗೆ ಸಮಾಧಾನ ಹೇಳಿ ತಪ್ಪಿಹೋದ ಪುತ್ರನನ್ನು ಮತ್ತೆ ಪ್ರಸಾದಿಸೆಂದು ದೈವದಲ್ಲಿ ಪ್ರಾರ್ಥಿಸುತ್ತ ಅಪೂರ್ವವಾದ ಕನ್ಯಕಾವ್ರತವನ್ನು ಆಚರಿಸಿರಿ ಎಂದು ಉಪದೇಶಿಸಿದರು. ಪರಾಶಕ್ತಿಯಾದ ಆದಿ ಕನ್ಯಕೆಯ ಮಹಾವ್ರತದೀಕ್ಷೆಯನ್ನು ಹೊಂದಿದ ಧರ್ಮನಂದನನ ತಾಯಿತಂದೆಗಳು ಶಾಸ್ತ್ರೋಕ್ತವಿಧಿಯಂತೆ ಏಕಾಗ್ರಚಿತ್ತರಾಗಿ ವ್ರತವನ್ನು ಆಚರಿಸಲು ಮೊದಲು ಮಾಡಿದರು, ವ್ರತಸಮಾಪ್ತಿಯ ಸಮಯವು ಹತ್ತಿರವಾಯಿತು.

ಅಲ್ಲಿ ರಸಾತಲದಲ್ಲಿ ಧರ್ಮನಂದನನಿಗೆ ಸಮಸ್ತ ಜ್ಞಾನವನ್ನು ಪ್ರಸಾದಿಸಿದ ಆದಿಶೇಷನು ಚ್ಯವನಾಶ್ರಮದಲ್ಲಿಯ ಪರಿಸ್ಥಿತಿಯನ್ನು ದಿವ್ಯದೃಷ್ಟಿಯಿಂದ ನೋಡಿ ಧರ್ಮನಂದನನೊಡನೆ, "ಸುಕುಮಾರ! ನಿನ್ನನ್ನು ಕಾಣಲು ಬಲು ಶೋಕಿಸುತ್ತಿರುವ ನಿನ್ನ ಮಾತಾಪಿತರುಗಳು ನಿನ್ನ ಗುರುವಿನ ಉಪದೇಶಾನುಸಾರ ಆದಿಕನ್ಯಾದೇವಿಯ ಮಹಾವ್ರತವನ್ನು ಆಚರಿಸುತ್ತಿದ್ದಾರೆ. ನೀನು ಶೀಘ್ರವಾಗಿ ನಿನ್ನ ಜನನೀಜನಕರ ಬಳಿಸಾರಿ ಅವರಿಗೆ ಮನಶ್ಶಾಂತಿಯನ್ನುಂಟು ಮಾಡಬೇಕಾಗಿದೆ," ಎಂದು ಹೇಳಿ ಲೋಕಾಧಾರಕನಾದ ಆ ಅನಂತನು ತನ್ನ ಸಂಕಲ್ಪ ಪ್ರಭಾವದಿಂದ ಆ ಮರುಕ್ಷಣವೇ ಧರ್ಮನಂದನನು ತನ್ನ ತಂದೆತಾಯಿಗಳ ಬಳಿ ಸೇರುವಂತೆ ಮಾಡಿದನು. ವ್ರತಸಮಾಪ್ತಿಸಮಯಕ್ಕೆ ಆಕಸ್ಮಿಕವಾಗಿ ಆಗಮಿಸಿದ ಪುತ್ರನನ್ನು ಕಂಡು ಅವನ ತಂದೆತಾಯಿಗಳು, ಪ್ರಿಯ ಶಿಷ್ಯನನ್ನು ಕಂಡ ಚ್ಯವನರು ಆಶ್ರಮವಾಸಿಗಳು ಆಶ್ಚರ್ಯಾನಂದದಲ್ಲಿ ಮುಳುಗಿದರು.

ಚೂಡಾಮಣಿ ದಂಪತಿಗಳು ವ್ರತ ಸಮಾಪ್ತಿ ಮಾಡಿ ದೇವಿಯ ಚರಣಗಳಗೆ ಪ್ರಣಾಮವೆಸಗಿ, "ಓ ಪರಾಂಬಿಕೇ! ನಿನ್ನ ವ್ರತಾಚರಣೆಯ ಪ್ರಭಾವದಿಂದ ನಾವು ನಮ್ಮ ಪುತ್ರನನ್ನು ಮತ್ತೆ ಹೊಂದಿದೆವು. ನಿನ್ನ ಮಹಿಮೆಯು ಅಪಾರವು. ನಿನ್ನ ಲೀಲೆಗಳು ಅನಂತವು ಸರ್ವಕಾಲಗಳಲ್ಲಾ ನಮ್ಮ ಹೃದಯಗಳಲ್ಲಿ ನಿನ್ನ ಬಗ್ಗೆ ಅಚಲಭಕ್ತಿಯು ನೆಲೆಸುವಂತೆ ಅನುಗ್ರಹಿಸು' ಎಂದು ಪ್ರಾರ್ಥಿಸಿದರು. ಆನಂತರ ಧರ್ಮನಂದನನಿಂದ ಅಲ್ಲಿ ನಡೆದ ವೃತ್ತಾಂತವನ್ನೆಲ್ಲ

ಸವಿಸ್ತಾರವಾಗಿ ಕೇಳಿ ಗುರುಗಳಾದ ಚ್ಯವನ ಮಹರ್ಷಿಗಳು ಹರ್ಷಪುಲಕಾಂಕಿತ ಶರೀರಿಗಳಾಗಿ, "ಬಾಲಕ! ಧರ್ಮನಂದನ! ನಿನ್ನ ತ್ಯಾಗದ ಮಹಿಮೆಯು ಅನ್ಯರಿಗೆ ಅಸಾಧ್ಯವು. ಸಾಕ್ಷಾತ್ತಾಗಿ ಭಗವಾನ್ ಆದಿಶೇಷನಿಂದ ಸಮಸ್ತ ಜ್ಞಾನರಹಸ್ಯಗಳನ್ನು ಗ್ರಹಿಸಿದ ನಿನ್ನಂಥ ಭಾಗ್ಯಶಾಲಿ ಪುತ್ರನನ್ನು ನಿನ್ನ ತಂದೆತಾಯಿಗಳು ಧನ್ಯರು. ನಿನ್ನನ್ನು ಶಿಷ್ಯನನ್ನಾಗಿ ಹೊಂದಿದ ನಾನೂ ಕೂಡ ಎಷ್ಟೋ ಅದೃಷ್ಟವಂತನು. ನಿನ್ನ ಜನ್ಮದಿಂದ ವೈಶ್ಯವಂಶವೇ ಪುನೀತವಾಯಿತು. ಜ್ಞಾನಪುಂಜದಂತೆ ಪ್ರಕಾಶಿಸುತ್ತಿರುವ ನಿನಗೆ ಇನ್ನು ಬೋಧಿಸಬೇಕಾದುದೇನೂ ಇಲ್ಲ," ಎಂದು ಹೇಳಿ ಅವನಿಗೆ ಸಮಾವರ್ತನ ಸಂಸ್ಕಾರವನ್ನು ನಡೆಸಿದರು. ಚೂಡಾಮಣಿ ದಂಪತಿಗಳು ಆ ಮಹರ್ಷಿಗೆ ಇಚ್ಛಿಸಿದ ಗುರುದಕ್ಷಿಣಾದಿಗಳನ್ನು ಸಮರ್ಪಿಸಿ ತನಯುನನ್ನು ಕರೆದುಕೊಂಡು ತಮ್ಮ ನಗರಕ್ಕೆ ಹಿಂದಿರುಗಿದರು. ಆ ಧರ್ಮನಂದನನು ಆದಿಶೇಷನ ಕೃಪಾವಿಶೇಷದಿಂದ ತನಗೆ ಪ್ರಾಪ್ತಿಯಾದ ಅದ್ಭುತ ಜ್ಞಾನ ಸಂಪತ್ತನ್ನು ಎಲ್ಲರೊಡನೆ ಹಂಚಿಕೊಂಡು ತನ್ನ ಜೀವನದಲ್ಲಿ ಎಲ್ಲ ಭೋಗಭಾಗ್ಯಗಳನ್ನು ಅನುಭವಿಸಿ ವಿಶೇಷ ಪ್ರಖ್ಯಾತಿ ಹೊಂದಿದನು ಎಂದು ಪೌರಾಣಿಕೋತ್ತಮರಾದ ಸೂತಮುನಿಗಳು ಶೌನಕಾದಿ ಋಷಿಗಳಿಗೆ ವಿವರಿಸಿದ ಧರ್ಮನಂದನನ ಪವಿತ್ರಚರಿತ್ರೆಯನ್ನು ಸಾಲಂಕಾಯನರು ಮಣಿಗುಪ್ತಾದಿ ವೈಶ್ಯೋತ್ತಮರಿಗೆ ವಿವರಿಸಿ ತಿಳಿಸಿದರು.